# 1993ರಲ್ಲಿ ಚಿಕಾಗೋದಲ್ಲಿ ನಡೆದ ವಿಶ್ವಧರ್ಮ ಸಂಸತ್ತಿನ ಉದ್ಘಾಟನೆಯ ಸಂದರ್ಭದಲ್ಲಿ ಮಾಡಲಾದ ಘೋಷಣೆ

## ವಿಶ್ವಾತ್ಮಕ ನೀತಿಸಂಹಿತೆಯೆಡೆಗೆ

ಜಗತ್ತು ಈಗ ಸಂಕಷ್ಟದಲ್ಲಿದೆ. ಈ ಆತಂಕ ಎಷ್ಟು ವ್ಯಾಪಕವೂ ಮರ್ಮಸ್ಪರ್ಶಿಯೂ ಆಗಿದೆಯೆಂದರೆ ಅದರ ಮುಖ್ಯ ಅಭಿವ್ಯಕ್ತಿಗಳನ್ನು ಇಲ್ಲಿ ಹೆಸರಿಸಲೇಬೇಕಾಗಿದೆ.

ಶಾಂತಿಯು ಇಂದು ಮರೀಚಿಕೆಯಾಗಿದೆ. ಇಡೀ ಭೂಗ್ರಹವೇ ವಿನಾಶವನ್ನು ಎದುರಿಸುತ್ತಿದೆ. ನೆರೆಹೊರೆಯವರೇ ಪರಸ್ಪರರಿಂದ ಭೀತಿಗೆ ಸಿಲುಕಿದ್ದಾರೆ. ಗಂಡಸರು ಹೆಂಗಸರು ಎಲ್ಲರೂ ಒಬ್ಬರಿಗೊಬ್ಬರು ಎಲ್ಲೆಡೆ ಪರಕೀಯರೆನಿಸಿದ್ದಾರೆ. ಮಕ್ಕಳು ಅನಾಥವಾಗಿ ಸಾಯುತ್ತಿವೆ.

ಇದು ಅಸಹನೀಯ.

ಜಗತ್ತಿನ ಪರಿಸರವನ್ನು ಹಾಳುಗೆಡವುತ್ತಿರುವ ಧೋರಣೆಗಳನ್ನು ನಾವು ಖಂಡಿಸುತ್ತೇವೆ.

ಜೀವನದ ಸತ್ವವನ್ನೇ ಹೀರುತ್ತಿರುವ ಬಡತನ, ಶರೀರವನ್ನು ಕೃಶಗೊಳಿಸುತ್ತಿರುವ ಹಸಿವು, ಅಸಂಖ್ಯ ಕುಟುಂಬಗಳಿಗೆ ಮುಳುವಾಗಿರುವ ಆರ್ಥಿಕ ಅಸಮಾನತೆ – ಇವನ್ನು ನಾವು ಖಂಡಿಸುತ್ತೇವೆ.

ಎಲ್ಲ ರಾಷ್ಟ್ರಗಳಲ್ಲಿ ಹರಡುತ್ತಿರುವ ಸಾಮಾಜಿಕ ಅಸ್ತವ್ಯಸ್ತತೆ, ಪ್ರಬಲರ ನ್ಯಾಯೋಲ್ಲಂಘನೆಯಿಂದಾಗಿ ಜನಸಾಮಾನ್ಯರು ಹೆಚ್ಚುಹೆಚ್ಚು ದುಃಸ್ಥಿತಿಗೀಡಾಗುತ್ತಿರುವುದು, ಅರಾಜಕತೆ, ಶಿಶುಮರಣಗಳು, ಮತಗಳ ಹೆಸರಿನಲ್ಲಿ ಹಿಂಸಾಚರಣೆ – ಇವನ್ನೆಲ್ಲ ನಾವು ಖಂಡಿಸುತ್ತೇವೆ.

ಈ ಎಲ್ಲ ಆತಂಕವೂ ನಿವಾರಣೀಯ. ಏಕೆಂದರೆ ಅದಕ್ಕೆ ಅಗತ್ಯವಿರುವ ನೈತಿಕ ಆಧಾರಸೂತ್ರಗಳು ಎಂದಿನಿಂದಲೂ ಲಭ್ಯವಿವೆ. ಅವನ್ನು ಮಾನ್ಯ ಮಾಡಿದಲ್ಲಿ ವ್ಯಕ್ತಿಗಳ ಸ್ಥಿತಿಯೂ, ಜಗದ್‌ವ್ಯವಸ್ಥೆಯೂ ಸುಧಾರಿಸಬಲ್ಲವು; ವ್ಯಕ್ತಿಗಳ ಮತ್ತು ಸಮಾಜಗಳ ಹತಾಶೆಯೂ ಗೊಂದಲಗಳೂ ನಿವಾರಣೆಯಾದಾವು.

ಎಲ್ಲ ಜಗದ್ಧರ್ಮಗಳ ಬೋಧೆಗಳನ್ನೂ ಆಚರಣೆಗಳನ್ನೂ ನಾವು ಅಂಗೀಕರಿಸಿ ಗೌರವಿಸಿದ್ದೇವೆ. ಎಲ್ಲ ಧರ್ಮಗಳ ಬೋಧೆಗಳಲ್ಲಿ ಈ ವಿಶ್ವಾತ್ಮಕ ನೀತಿಸಂಹಿತೆಯ ಮೌಲ್ಯಗಳು ಅಡಕವಾಗಿವೆ. ಈಗ ಅಗತ್ಯವಿರುವುದು ಅವನ್ನು ಹೃದ್ಗತ ಮಾಡಿಕೊಂಡು ಆಚರಣೆಗೆ ತರುವುದು ಮಾತ್ರ.

ಎಲ್ಲ ಸಮುದಾಯಗಳಿಗೆ, ಜನಾಂಗಗಳಿಗೆ, ರಾಷ್ಟ್ರಗಳಿಗೆ ಮತ್ತು ಮತಗಳಿಗೆ, ಸಕಲ ಜೀವನಕ್ಷೇತ್ರಗಳಿಗೂ ಅನ್ವಯಿಸುವ ಹಲವು ಸ್ಥಿರರೂಪದ ಮಾನದಂಡಗಳು ಇವೆ; ಮಾನವನ ನಡವಳಿಕೆಗೆ ಬೇಕಾದ ಚಿರಂತನ ಮಾರ್ಗದರ್ಶಕ ಸೂತ್ರಗಳು ಧರ್ಮಗ್ರಂಥಗಳ ಬೋಧೆಗಳಲ್ಲಿ ಇವೆ. ಅವುಗಳ ಅನುಸರಣೆಯಿಂದ ಮಾತ್ರ ಜಗತ್ತಿನಲ್ಲಿ ಸುವ್ಯವಸ್ಥಿತ ಹಾಗೂ ಶಾಶ್ವತ ಜೀವನಕ್ರಮ ಸಾಧ್ಯ ಎಂಬುದು ನಮ್ಮ ದೃಢವಾದ ನಿಲುವು.

ನಾವು ಹೀಗೆ ಘೋಷಿಸುತ್ತೇವೆ:

"ನಾವೆಲ್ಲ ಪರಸ್ಪರಾವಲಂಬಿಗಳು. ಸಮಷ್ಟಿಯು ಕ್ಷೇಮದಿಂದಿದ್ದಲ್ಲಿ ಮಾತ್ರ ವ್ಯಷ್ಟಿಯೂ ಕ್ಷೇಮದಿಂದಿದ್ದೀತು. ಜನ ಮಾತ್ರವಲ್ಲದೆ ನೆಲ, ಗಾಳಿ, ಜಲ, ಪ್ರಾಣಿಗಳು, ಸಸ್ಯಗಳು ಸೇರಿದಂತೆ ಸಕಲ ಸೃಷ್ಟಿಯನ್ನೂ ನಾವು ಗೌರವಿಸುತ್ತೇವೆ.

"ನಮ್ಮೆಲ್ಲ ಕಾರ್ಯಾಚರಣೆಗಳಿಗೆ ನಾವು ವೈಯಕ್ತಿಕ ಹೊಣೆ ವಹಿಸಿಕೊಳ್ಳುತ್ತೇವೆ. ನಮ್ಮ ಎಲ್ಲ ನಿರ್ಣಯಗಳೂ ಆಚರಣೆಗಳೂ, –ನಿಷ್ಕ್ರಿಯತೆ ಕೂಡ–ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮ ಬೀರುತ್ತವೆ.

"ನಮ್ಮ ಬಗ್ಗೆ ಇತರರು ಹೇಗೆ ಇರಬೇಕೆಂದು ನಾವು ಬಯಸುತ್ತೇವೋ ಅದರಂತೆ ಇತರರ ವಿಷಯದಲ್ಲಿಯೂ ನಾವು ನಡೆದುಕೊಳ್ಳಬೇಕು. ಪ್ರತಿಯೊಬ್ಬ ವ್ಯಕ್ತಿಗೂ, ಪ್ರತಿಯೊಂದು ಜೀವಿಗೂ ಘನತೆಯುಂಟು. ಎಲ್ಲರಲ್ಲಿಯೂ ನಾವು ಮಾನವೀಯ ಸದ್ಭಾವದಿಂದಲೂ ಸಹಿಷ್ಣುತೆಯಿಂದಲೂ ನಡೆದುಕೊಳ್ಳಬೇಕು. ಗತಕಾಲದ ಸ್ಮೃತಿಗಳಿಗೆ ದಾಸರಾಗದೆ, ಆದರೆ ಅದರಿಂದ ಯುಕ್ತ ಪಾಠಗಳನ್ನು ಕಲಿತು ಕ್ಷಮಾಗುಣವನ್ನು ಮೆರೆಯೋಣ. ಸಂಕುಚಿತ ಭೇದಗಳನ್ನು ಮರೆತು ಐಕಮತ್ಯವನ್ನು ಪೋಷಿಸಿಕೊಳ್ಳೋಣ.

"ಇಡೀ ಮಾನವತೆಯನ್ನೇ ಒಂದು ಕುಟುಂಬವೆಂದು ನಾವು ಪರಿಗಣಿಸುತ್ತೇವೆ. ಆದ್ದರಿಂದ ಎಲ್ಲರಲ್ಲಿಯೂ ಉದಾರತೆಯಿಂದ ನಡೆದುಕೊಳ್ಳಬೇಕು. ನಾವು ಬಾಳಬೇಕಾದದ್ದು ನಮಗಾಗಿ ಮಾತ್ರವಲ್ಲ; ಇತರರಿಗೂ ಉಪಕಾರಕರಾಗಿರಬೇಕು. ವಿಶೇಷವಾಗಿ ಮಕ್ಕಳು, ವೃದ್ಧರು, ಬಡವರು, ಕ್ಲೇಶಕ್ಕೊಳಗಾದವರು, ಅಂಗವಿಕಲರು, ನಿರಾಶ್ರಿತರು, ಏಕಾಕಿಗಳು–ಇಂಥವರಿಗೆ ನಮ್ಮ ಅನುಕಂಪ ಸಲ್ಲುತ್ತದೆ. ಯಾರನ್ನೂ ಕೀಳೆಂದು ಭಾವಿಸಬಾರದು, ಯಾವುದೇ ರೀತಿಯಲ್ಲಿ ಅವರನ್ನು ಶೋಷಿಸಬಾರದು. ಪುರುಷರು, ಸ್ತ್ರೀಯರು ಎಂದು ಭೇದ ವೆಣಿಸದೆ ಎಲ್ಲರನ್ನೂ ಸಮಾನರೆಂದು ಕಾಣಬೇಕು. ಯಾವುದೇ ಲೈಂಗಿಕ ದುರಾಚಾರದಲ್ಲಿ ತೊಡಗಬಾರದು. ಒಬ್ಬರ ಮೇಲೆ ಇನ್ನೊಬ್ಬರು ಪ್ರಾಬಲ್ಯ ಸ್ಥಾಪಿಸಲು ಪ್ರಯತ್ನಿಸಬಾರದು.

"ಅಹಿಂಸೆ, ನ್ಯಾಯ, ಶಾಂತಿ, ಸರ್ವರಲ್ಲಿ ಗೌರವ – ಇವಕ್ಕೆ ನಾವು ಬದ್ಧರಾಗಿದ್ದೇವೆ. ಅನ್ಯರನ್ನು ದಮನಕ್ಕೂ, ಹಿಂಸೆಗೂ ಗುರಿಮಾಡುವುದನ್ನು ನಾವು ವಿರೋಧಿಸುತ್ತೇವೆ. ಭಿನ್ನತೆ–ವಿರಸಗಳನ್ನು ಪರಿಹರಿಸಲು ಹಿಂಸೆಯು ಮಾರ್ಗವಾಗಬಾರದು.

"ಎಲ್ಲರಿಗೂ ಸಮಾನಾವಕಾಶಗಳಿರುವ ನ್ಯಾಯಾನುಗುಣ ಸಾಮಾಜಿಕ, ಆರ್ಥಿಕ ವ್ಯವಸ್ಥೆಯ ಸ್ಥಾಪನೆಗಾಗಿ ನಾವು ಶ್ರಮಿಸಬೇಕು. ಸದಾ ಸತ್ಯಕ್ಕೆ ನಿಷ್ಠರಾಗಿಯೂ, ಅನುಕಂಪಪೂರ್ವಕವಾಗಿಯೂ ಪೂರ್ವಗ್ರಹವಿಲ್ಲದೆಯೂ, ದ್ವೇಷರಹಿತವಾಗಿಯೂ ವರ್ತಿಸಬೇಕು. ನಮಗೆ ಸಲ್ಲದುದನ್ನು ಬೇರೆಯವರಿಂದ ಕಸಿದುಕೊಳ್ಳಬಾರದು; ಎಲ್ಲ ಬಗೆಯ ಕಳ್ಳತನದಿಂದ ದೂರವಿರೋಣ; ದುರಾಸೆ, ಅಧಿಕಾರಾಕಾಂಕ್ಷೆ, ಪ್ರತಿಷ್ಠಾಕಾಮನೆ, ಧನಲೋಭಗಳನ್ನು ಮೀರಿ ನ್ಯಾಯಪೂರ್ಣ ಮತ್ತು ಶಾಂತಿಪೂರ್ಣ ಜಗತ್ತನ್ನು ನೆಲೆಗೊಳಿಸೋಣ.

"ಆಂತರಿಕ ಮನಃಸ್ಥಿತಿ ಬದಲಾದ ಹೊರತು ವ್ಯಕ್ತಿಗಳು ಬದಲಾಗಲಾರರು. ಆದ್ದರಿಂದ ಸಚ್ಚಿಂತನೆ, ಪ್ರಾರ್ಥನೆ, ಧ್ಯಾನಗಳ ಮೂಲಕ ನಮ್ಮ ಮನಸ್ಸುಗಳನ್ನು ಅನುಶಾಸನಕ್ಕೆ ಒಳಪಡಿಸಿ ಪ್ರಜ್ಞೆಯನ್ನು ವಿಸ್ತರಿಸಿಕೊಳ್ಳೋಣ. ಅಗತ್ಯಬಿದ್ದಾಗ ತ್ಯಾಗಕ್ಕೂ ಸಿದ್ಧರಾಗದಿದ್ದಲ್ಲಿ ಪರಿಸ್ಥಿತಿಯಲ್ಲಿ ಏನೂ ಬದಲಾವಣೆ ತರಲಾಗದು. ಆದ್ದರಿಂದ ಅನ್ಯರ ಬಗ್ಗೆ ಕಾಳಜಿ, ಸಾಮಾಜಿಕ ನೆಮ್ಮದಿ, ಸಾರ್ವತ್ರಿಕ ಶಾಂತಿ, ಪರಿಸರಕ್ಕೆ ವಿಘಾತ ತರದಂಥ ಜೀವನಕ್ರಮ – ಇವನ್ನೊಳಗೊಂಡ ವಿಶ್ವಸಾರ್ವತ್ರಿಕ ನೀತಿಸಂಹಿತೆಗೆ ನಾವು ಬದ್ಧತೆಯನ್ನು ಘೋಷಿಸುತ್ತಿದ್ದೇವೆ ಮತ್ತು ಜಗತ್ತಿನ ಎಲ್ಲರನ್ನೂ, ಅವರು ಯಾವುದೇ ಮತಕ್ಕೆ ಸೇರಿರಲಿ, ಇಲ್ಲದಿರಲಿ, ಈ ನೀತಿಸಂಹಿತೆಯನ್ನು ಸ್ವೀಕರಿಸಲು ಆಹ್ವಾನಿಸುತ್ತಿದ್ದೇವೆ." ★